ಆ) ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ 2009–14 ರಂತೆ ಈ ಕೆಳಕಂಡಂತೆ ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡಲಾಗುವುದು.

1) ಬಂಡವಾಳ ಹೂಡಿಕೆ ಉತ್ತೇಜನಾ ಸಹಾಯಧನ

2) ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ಮರುಪಾವತಿ.

3) ಭೂ ಪರಿವರ್ತನ ಶುಲ್ಕ ಮರುಪಾವತಿ

4) ಪ್ರವೇಶ ತೆರಿಗೆ ವಿನಾಯಿತಿ.

5) ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿಗಳು

6) ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ

7) ತ್ಯಾಜ್ಯ ಸಂಸ್ಕರಣಾ ಘಟಕದ ಸ್ಥಾಪನೆಗೆ ಸಹಾಯಧನ

8) ವಿದ್ಯುತ್ ತೆರಿಗೆಯಿಂದ ವಿನಾಯಿತಿ

9) ತಂತ್ರಜ್ಞಾನ ಮೇಲ್ದರ್ಜೆಗೇರಿಸಲು, ಗುಣಮಟ್ಟ ಪ್ರಮಾಣ ಪತ್ರ ಹಾಗೂ ಪೇಟೆಂಟ್ ನೊಂದಾಯಿಸಲು ಉತ್ತೇಜನ.

10) ಮಳೆ ಕೊಯ್ಲು ಮತ್ತು ಜನ ಸಂರಕ್ಷಣೆ ಹಾಗೂ ಶಕ್ತಿ ಸಂರಕ್ಷಣೆಗೆ ಉತ್ತೇಜನ.

11) ಯೋಜನಾ ವರದಿ ತಯಾರಿಕೆಯ ವೆಚ್ಚದ ಹಿಂಪಾವತಿ ಇತ್ಯಾದಿ.

ಇ) ಸುಮಾರು ರೂ. 198.75 ಲಕ್ಷಗಳು.

ಈ) ಹೌದು.

ಉ) ಸಮಾನ ಪರಿಸ್ಥಿತಿಯಲ್ಲಿರುವ ಇತರೆ ವ್ಯಕ್ತಿಗಳಿಂದ ವೃತ್ತಿ ತೆರಿಗೆ ವಸೂಲಿ ಮಾಡಿ, ಸಣ್ಣ ಕೈಗಾರಿಕೆಗಳಿಗೆ ಮಾತ್ರ ವೃತ್ತಿ ತೆರಿಗೆ ವಿನಾಯಿತಿ ನೀಡುವುದು ಸಮಂಜಸವಲ್ಲವೆಂದು ಪರಿಗಣಿಸಿ, ಸಣ್ಣ ಕೈಗಾರಿಕೆಗಳ ಕೋರಿಕೆಯನ್ನು ಸರ್ಕಾರವು ಒಪ್ಪಿರುವುದಿಲ್ಲ.

ರಾಜ್ಯದಲ್ಲಿ ಚುನಾವಣೆ ನಡೆಸದೆ ಇರತಕ್ಕ ಟ್ರಸ್ಟ್‌ಗಳು

779(709) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ನೋಂದಾಯಿತವಾಗಿರುವ ಟ್ರಸ್ಟ್‌ಗಳ ಸಂಖ್ಯೆ ಎಷ್ಟು ;

ಆ) ಈ ಟ್ರಸ್ಟ್‌ಗಳ ಮೇಲೆ ಸರ್ಕಾರಕ್ಕೆ ಇರತಕ್ಕ ಅಧಿಕಾರಗಳೇನು ;

ಇ) ಈ ಟ್ರಸ್ಟ್‌ಗಳಲ್ಲಿ ಪದಾಧಿಕಾರಿಗಳ ನೇಮಕ, ಪ್ರತಿವರ್ಷ ಲೆಕ್ಕ ಪತ್ರಗಳ ತಪಾಸಣೆ, ಸರ್ವೆ ಸದಸ್ಯರ ಸಭೆ ನಡೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಪ್ರತಿ ವರ್ಷ ಟ್ರಸ್ಟ್ ಡೀಡ್ ಪ್ರಕಾರ ಕಾರ್ಯನಿರ್ವಹಿಸದೇ ಇರತಕ್ಕ ಟ್ರಸ್ಟ್‌ಗಳ ವಿರುದ್ಧ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ನೋಂದಣಿಯಾಗಿರುವ ಟ್ರಸ್ಟ್‌ಗಳ ಒಟ್ಟು ಸಂಖ್ಯೆ : 70719 ಇರುತ್ತದೆ.

ಆ) ಯಾವುದೇ ಅಧಿಕಾರವಿರುವುದಿಲ್ಲ.

ಇ) ಈ ಟ್ರಸ್ಟ್‌ಗಳಲ್ಲಿ ಪದಾಧಿಕಾರಿಗಳ ನೇಮಕ ಪ್ರತಿ ವರ್ಷ ಲೆಕ್ಕ ಪತ್ರಗಳ ತಪಾಸಣೆ, ಸರ್ವ ಸದಸ್ಯರ ಸಭೆ ನಡೆಸುವ ಬಗ್ಗೆ ಭಾರತೀಯ ಟ್ರಸ್ಟ್ ಕಾಯ್ದೆ 1982ರ ಉಪಬಂಧಗಳಲ್ಲಿ ಯಾವುದೇ ನಿಬಂಧನೆ ಇರುವುದಿಲ್ಲ.

ಈ) ಪ್ರತಿ ವರ್ಷ ಟ್ರಸ್ಟ್ ಡೀಡ್ ಪ್ರಕಾರ ಕಾರ್ಯನಿರ್ವಹಿಸದೇ ಇರತಕ್ಕ ಟ್ರಸ್ಟ್‌ಗಳ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಅವಕಾಶ ಇರುವುದಿಲ್ಲ.

ನಾಲೆಗಳ ಅಭಿವೃದ್ಧಿ

780(974) ಶ್ರೀ ರಮೇಶ್ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿರುವ ಸುಮಾರು 300 ವರ್ಷಗಳ ಹಳೆಯ ಕಾಲುವೆಗಳಾದ ಸಿಡಿಎಸ್, ವಿರಿಜಾ ನಾಲೆ, ದೇವರಾಯನಾಲೆ, ಆರ್.ಬಿ.ಎಲ್.ಎಲ್. ಹಾಗೂ ಎಲ್.ಬಿ.ಎಲ್.ಎಲ್. ನಾಲೆಗಳು ದುರಸ್ತಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಮೇಲ್ಕಂಡ ನಾಲೆಗಳ ದುರಸ್ತಿಯ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ;

ಇ) ಈ ಎಲ್ಲಾ ನಾಲೆಗಳನ್ನು ಆಧುನೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;